# ಶ್ರೀವಿಜಯರಾಯರಿಂದ ರಚಿಸಲ್ಪಟ್ಟ ತತ್ವಾಭಿಮಾನಿದೇವತೆಗಳ ಸುಳಾದಿ

**ರಾಗ : ಭೈರವಿ** **ತಾಳ : ಧ್ರುವ**

"ನಮೋ ನಮೋ ಸಮಸ್ತ ತತ್ವಾಭಿಮಾನಿಗಳಿರಾ ।
ನಿಮಗೆ ಹಸ್ತವ ಮುಗಿದು ಕೊಂಡಾಡುವೆ ।
ಕ್ರಮದಿಂದ ಬಿನ್ನಪವ ಲಾಲಿಸಿ ಕೇಳುವದು ।
ಅಮರ ನಿಮ್ಮಗ ಮಜ್ಜನ ಗೋಸುಗ ।
ಅಮಲಮತಿ ಇತ್ತು ಜ್ಞಾನ ಭಕ್ತಿ ಇಂದ ।
ರಮೆಯರಸನ್ನ ನೋಳ್ಪ ಸಾಧನ ತೋರಿ ।
ಗಮನಾದಿ ಮೊದಲಾದ ವ್ಯಾಪಾರ ನಿಮ್ಮಾಧೀನ ।
ಶ್ರಮ ಸಾಧ್ಯವಾಗದಂತೆ ಪ್ರೇಣಿಇತ್ತು ।
ತಮೋ ರಜೋ ಗುಣದವರ ಬಾಧಿಯ ತಪ್ಪಿಸಿ ।
ಉತ್ತಮ ಯಾತ್ರಿ ಮಾಡಿಸುವದು ತ್ರಯಕ್ಷೇತ್ರದ ।
ಕುಮತ ಪೊಂದಿದ ನಿತ್ಯ ಕುಮತಿ ಜನರ ಸಂಗ ।
ನಿಮಿಷವಾದರೂ ಕೊಡದೆ ಪಾಲಿಸಬೇಕು ।
ಯಮ ನೇಮ ಮಿಗಿಲಾದ ಸತ್ಕರ್ಮಾಚಾರದಿಂದ ।
ಸಮಚಿತ್ತ ಭೇದದಿಂದ ಇರಲಿ ಎನಗೆ ।
ನಮೋ ನಮೋ ಸಮಸ್ತ ತತ್ವಾಭಿಮಾನಿಗಳಿರಾ ।
ಕುಮತಿಯ ಬಿಡಿಸುವದು ನಾನೆಂಬೊ ಮಾತಿನಲ್ಲಿ ।
ಭ್ರಮಣವಲ್ಲದೆ ಲೇಸು ಲೇಸು ಕಾಣೆ ।
ರಮೆಯರಸ ನಮ್ಮ ವಿಜಯವಿಠ್ಠಲನಂಘ್ರಿ ।
ಕಮಲಹೃತ್ಕಮಲದಲ್ಲಿ ಪೊಳೆವಂತೆ ಕೃಪೆಮಾಡೋ ॥ ೧ ॥

**ತಾಳ : ಮಟ್ಟ**

ತನುವೆನ್ನದೆಂಬೆನೆ ತನುವೆನ್ನದಲ್ಲ ।
ಮನವೆನ್ನದೆಂಬೆನೆ ಮನವೆನ್ನದಲ್ಲ ।
ಧನವೆನ್ನದೆಂಬೆನೆ ಧನವೆನ್ನದಲ್ಲ ।
ಜನವೆನ್ನದೆಂಬೆನೆ ಜನವೆನ್ನದಲ್ಲ ।
ತನು ಮನ ಧನ ಜನವು ಅನುದಿನದಲಿ ನೋಡೆ ।

www.vijayadasaru.net www.sarvamoola.org www.sudhama.org

ವನಜಭವಾದಿಗಳೆ ಎಣಿಸೆ ಪೇಳುವದೇನು ।
ಕೊನೆ ಮೊದಲು ನಿಮ್ಮಾಧೀನವಯ್ಯಾ ಬಿಡದೆ ।
ಇನಿತು ಪೊಂದಿರಲಿಕ್ಕೆ ಮಣಿದು ಹೇಳುವ ಮಾ– ।
ತಿನಉಪಚಾರಾವ್ಯಾಕೆ ಘನ ಮೂರುತಿ ನಮ್ಮ ವಿಜಯವಿಠ್ಠನ್ನ ।
ಪ್ರೇರಣೆ ಇಂದಲಿ ನಿಮ್ಮ ಸಕಲ ಚೇಷ್ಟೆಪ್ರದವೋ ॥ ೨ ॥

### ತಾಳ : ತ್ರಿವಿಡಿ

ಭೀತಿಪ್ರದ ಜೀವಜಡಗಳೆಲ್ಲ ನಿಮ್ಮ ।
ಚಾತುರ್ಯ ಪ್ರೇರಣೆ ಸಿದ್ಧವಾಗಿರಲಿಕ್ಕೆ ।
ಭೂತಳದೊಳು ನಾನಾಯಾತ್ರಿ ಚರಿಸುವಾಗ ।
ಭೀತಿ ಬಡಲ್ಯಾಕೆ ತಾತ್ವಿಕರೆ ।
ದೈತ್ಯರ ಗಣದಿಂದ ಇಂತಾಗುವದಲ್ಲ ।
ಪ್ರೀತಿವಂತರು ನೀವು ನಾನನ್ಯನೇ ।
ಜಾತಕರ್ಮಾರಭ್ಯ ಅಂದಿನ ಪರಿಯಂತ ।
ಯಾತಕಾಲೋಚನೆ ಸರ್ವರಿರಲು ।
ಆತುಮದೊಳಗೆ ಸತ್ವ ರಾಜಸ ತಾಮಸ ।
ಗಾತುರ ಗೋಳಕ ನಿಮ್ಮ ದೇಹ ।
ಈ ತೆರದಲಿ ಮೂರು ವಿಧವಾಗಿ ಸಮಸ್ತ ।
ಭೂತಳದೊಳಗೆ ನೀವು ಪೊಂದಿರಲು ।
ಭೀತಿ ಎನಗೆ ಉಂಟೆ ಎಲ್ಲಿದ್ದರು ಕೇಳಿ ।
ಮಾತ್ರಾಕಾಲವಾಗೆ ಬಲು ಸೌಖ್ಯವೆ ।
ಗೋತುರ ತರು ಗುಹ ವನಾರಣ್ಯ ಪೊದೆಮಿಕ್ಕ ।
ಭೀತಿಗಳಿರಲೇನು ನಿಮ್ಮ ಬಲವು ।
ಸ್ವಾತಂತ್ರ ಪುರುಷ ಶ್ರೀವಿಜಯವಿಠ್ಠಲರೇಯನ ।
ದೂತನದವನಿಗೆ ಭಯವಿಲ್ಲ ಭಯವಿಲ್ಲ ॥ ೩ ॥

### ತಾಳ : ಅಟ್ಟ

ದೇಶ ಕಾಲ ಕರ್ಮ ಗುಣ ವಿಚಾರಾಚಾರ ।
ಭಾಷೆ ರೂಪ ಕ್ರಿಯ ಭೇದವಾದರೇನು ।
ದೋಷ ದೂರರೆ ನೀವು ತತ್ತತ್ಸ್ಥನದಲ್ಲಿ ।
ವಾಸವಾಗಿದ್ದು ನಂಬಿದ ಜನರ
ಮನೋಪಾಸನ ಪ್ರಕಾರದೆಲ್ಲೀಸುತಿರಲಿಕ್ಕೆ ।
ವಿಸುಬಗೆಯಿಂದ ಚಿಂತಿಸೆ ಸಲ್ಲದು ।
ಈ ಶರೀರವೇ ನಿಮ್ಮ ಚರಣಕ್ಕೆ ಅರ್ಪಿಸಿ ।
ದಾಸದಾಸನೆಂದು ತಲೆವಾಗಿಕೊಂಡಿಪ್ಪೆ ।

ಲೇಸು ಹೊಲ್ಲೆಗಳೆಲ್ಲ ನೀವಿತ್ತದಹುದು ।
ದೇಶಕಾಲಾದಿಯಗೊಡವೆ ಎನಗೆ ಯಾಕೆ ।
ಭಾಸುರ ಕೀರ್ತಿ ಅಪಕೀರ್ತಿ ನಿಮ್ಮದೆ ಸರಿ ।
ಈಸು ದಿವಸ ನಾನು ಬದುಕಿದಕೆ ।
ಎನ್ನಾಶೆ ಸಿದ್ಧಿಸಲಿ ಉತ್ತಮರ ಸಂಗತಿಯಿಂದ ।
ಕೋಶ ಭಂಡಾರಾದಿ ಅಹಿಕ ಬೇಡುವುದಿಲ್ಲ ।
ಸಾಸಿರಕೆ ನಿಮ್ಮ ಪ್ರಸಾದವಾಗಲಿ ।
ಸಾಸಿವಿಕಾಳಷ್ಟು ನಿಮ್ಮವಿನಾವಾಗಿ ।
ದ್ವೇಷ ದೂಷಣೆ ಸ್ನೇಹ ಮಾಡುವರೆ ಇಲ್ಲಾ ।
ಲೇಶಕಾಲದಿಂದ ಮಹಾಕಾಲ ಪರ್ಯಂತ ।
ಈಶನೊಬ್ಬನು ಕಾಣೊ ಸರ್ವರ ಪ್ರೇರಕ ।
ಕಾಶಿಪುರಾಧೀಶ ವಿಜಯವಿಠ್ಠಲ ।
ಸರ್ವೇಶನ ತೋರಿಸಿಕೊಡುವದು ಸರ್ವದಾ ॥ ೪ ॥

### ತಾಳ : ಆದಿ

ಶರಣು ಜಯಂತ ಮಿತ್ರ ಮನು ಪ್ರಾಣ ।
ಧರುಣಿವರುಣ ಮರುತ ಬಾಂಧವ ವಾಯು ಗಣಪ
ಪಂಚ ಮರುತ ತರಣಿ ದಿಗ್ದೇವ ದಕ್ಷ ಅಶ್ವಿನಿಯರು ಇಂದ್ರ ।
ಹರ ಶೇಷ ಗರುಡ ವಾಯು ಬ್ರಹ್ಮಲಕುಮಿದೇವಿ ।
ಪರಮಕರುಣದಿಂದ ಪ್ರತಿ ಪ್ರತಿ ದಿನದಲ್ಲಿ ।
ಪೊರೆವುತ್ತ ಬರುವದು ಭಕ್ತಗೆ ಒಲಿದು ಎಲ್ಲ ।
ಚಿರಕಾಲದಲಿ ನಿಮ್ಮ । ಸ್ಮರಣೆ ಪಾಲಿಸಿ ಪುಣ್ಯ ।
ಶರಧಿಯೊಳಿಡುವದು ಹರಿಮೆಚ್ಚುವಂತೆ ಎನ್ನ ।
ಕರಚರಣಾದಿಗಳಲ್ಲಿ ವ್ಯಾಪಾರ ನಿಮ್ಮದು ।
ಹಿರಿದಾಗಿ ಪೇಳುವದೇನು ತಾತ್ವಿಕ ಜನರೆ ।
ಮೊರೆಕೊಕ್ಕೆ ನಿಮ್ಮ ಪಾದ ಮನೋವಾಚಾ ಕಾಯದಲಿ ।
ತ್ವರಿತದಲಿ ಎನ್ನ ಮನೋಭಿಷ್ಟಿಯಾಗಲಿ ।
ಪುರಂದರನುತ ನಮ್ಮ ವಿಜಯವಿಠ್ಠಲರೇಯನ ।
ಚರಣ ಕಾಣುವ ಯೋಗ ತೋರಿಸಿಕೊಡುವದು ॥ ೫ ॥

### ಜತೆ

ಜಗತ್ತಿನ ವ್ಯಾಪಾರ ನಿಮ್ಮಿಂದಾಗುವದು ।
ಪನ್ನಗಶಾಯಿ ವಿಜಯವಿಠ್ಠಲನಲ್ಲಿ ಮನವಿರಲಿ ॥ ೬ ॥

□□

Courtesy:Vijayasampada